ಮಂಡವಿಗಳು

ಈಗ ಮನವಿಯನ್ನು ಅರ್ಪಿಸುವುದು. ಶ್ರೀ ಕೆ. ಕುಶಾಲ ಅವರು ಮನವಿಯನ್ನು ಒಪ್ಪಿಸಬೇಕು.

ಶ್ರೀ ಕೆ. ಕುಶಾಲ.—ಉಡುಪಿ ತಾಲ್ಲೂಕಿನ ಗ್ರಾಮ ಸಹಾಯಕರ ಸಮಸ್ಯೆಗಳನ್ನು ಕುರಿತು ಮನವಿಯನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರಿಂದ ಮನವಿಯನ್ನು ಒಪ್ಪಿಸಲಾಯಿತು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನನ್ನ ಒಂದು ನಿಲುವಳಿ ಸೂಚನೆ ಇದೆ, ಮಾತನಾಡಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಈ ವಿಷಯದಲ್ಲಿ ಗಮನ ಸೆಳೆಯುವ ಸೂಚನೆ ಮತ್ತು ನಿಲುವಳಿ ಸೂಚನೆ ಎರಡು ಬಂದಿದೆ. ಈಗ ಮಾನ್ಯ ಬಂಗಾರಪ್ಪನವರು, ಮೊಯಿಲಿಯವರು, ಬಳವಲಿಂಗಪ್ಪನವರು ಮಾತನಾಡಿ..

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೆ, ನನಗೂ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು.—ಇಲ್ಲ. ಇಲ್ಲ, ಸಹಿ ಮಾಡಿದವರಿಗೆ ಎಲ್ಲರಿಗೂ ಅವಕಾಶ ಕೊಡಬೇಕೆಂದು ಇಲ್ಲ. ಈಗ ಬಂಗಾರಪ್ಪನವರು ವಿಷಯದ ಕುರಿತು ಮಾತನಾಡುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಸನ್ಮಾನ್ಯ ಅಧ್ಯಕ್ಷರೆ. ನಾನು ಮತ್ತು ನಮ್ಮ ಪಕ್ಷದ ಮಾನ್ಯ ಸದಸ್ಯರುಗಳು ಅನೇಕ ಜನ ಈ ಒಂದು ಸೂಚನೆಯನ್ನು ತಾವು ನಿಲುವಳಿ ಸೂಚನೆಯನ್ನಾಗಿ ತೆಗೆದುಕೊಳ್ಳಬೇಕೆಂದು, ಕೇಳಿರುವುದರಿಂದ ನಾವು ಈ ಸೂಚನೆಯು ವಿಷಯ ಏನೆಂಬುದನ್ನು ತಮ್ಮ ಗಮನಕ್ಕೆ ತರಲಿತ್ತು ಇದ್ದೇವೆ.

ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ಬೆಂಗಳೂರು, ದಕ್ಷಿಣ ಕನ್ನಡ ಹಾಗೂ ರಾಜ್ಯದ ಇನ್ನಿತರ ಪ್ರದೇಶಗಳಲ್ಲಿ ಡಕಾಯಿತರಿಂದ ಕೊಲೆ ಮತ್ತು ದರೋಡೆ

ಅಧ್ಯಕ್ಷರು.—ತಾವು ನೋಟೀಸ್‌ನ್ನು ಓದಿ ಹೇಳಿ.

ಶ್ರೀ ಎಸ್. ಬಂಗಾರಪ್ಪ.—"ಬೆಂಗಳೂರು, ದಕ್ಷಿಣ ಕನ್ನಡ ಹಾಗೂ ರಾಜ್ಯದ ಇನ್ನುಳಿದ ಪ್ರದೇಶದಲ್ಲಿ ಡಕಾಯಿತರ ಹಾವಳಿಯಿಂದ ಜನರು ತತ್ತರಿಸಿದ್ದು, ಪರಿಸ್ಥಿತಿಯು ಗಂಭೀರತೆಯನ್ನು ಗಣನೆಗೆ ತೆಗೆದುಕೊಂಡು ಉಂಟಾಗಿರುವ ಪರಿಸ್ಥಿತಿಯ ಬಗ್ಗೆ ಚರ್ಚಿಸಲು ಅವಕಾಶಕ್ಕಾಗಿ ಈ ಸೂಚನೆಯನ್ನು ನೀಡುತ್ತೇವೆ"—ಈ ಒಂದು ಸೂಚನೆಯನ್ನು ತಮ್ಮ ಗಮನಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಈಗಾಗಲೇ ನಮ್ಮ ಸೂಚನೆಯಲ್ಲಿ ಹೇಳಿದ ಹಾಗೆ, ಕರ್ನಾಟಕ ರಾಜ್ಯದ ಅನೇಕ ಭಾಗಗಳಲ್ಲಿ ದರೋಡೆಗಳು ಅವ್ಯಾಹತವಾಗಿ ನಡೆದಿದೆ, ಮತ್ತು ನಡೆಯುತ್ತಾ ಇವೆ, ಅದರಲ್ಲಿಯೂ ಬೆಂಗಳೂರು ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ, ನಗರಕ್ಕೆ ಹೊಂದಿಕೊಂಡಿರತಕ್ಕಂತಹ ಪ್ರದೇಶಗಳಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವ್ಯಾಪಕವಾಗಿ ಈ ಪ್ರಕರಣಗಳು ಬೆಳೆದಿವೆ ಮತ್ತು ರಾಜ್ಯದ ಬೇರೆ ಬೇರೆ ಭಾಗಗಳಲ್ಲಿಯೂ ಕೂಡಾ ಇಂತಹ ಪ್ರಕರಣಗಳು ನಡೆಯುತ್ತಾ ಇವೆ, ಇವೊತ್ತು ಈ ದರೋಡೆ ಪ್ರಕರಣಗಳನ್ನು ಗಮನಿಸಿದಾಗ ಬರೆ ದರೋಡೆ ಮಾಡಿ, ಅಲ್ಲಿರತಕ್ಕಂತಹ ವಸ್ತುಗಳನ್ನು, ಹಣವನ್ನು, ಆಭರಣಗಳನ್ನು ತೆಗೆದುಕೊಂಡು. ಜನರಿಗೆ ತೊಂದರೆ ಕೊಡದೆ ಹೋದರೆ, ಅಂತಹ ಪ್ರಕರಣಗಳ ಸ್ವರೂಪ ಬೇರೆ ಆಗುತ್ತದೆ. ಆದರೆ ಈಗ ನಡೆಯುತ್ತಿರುವ ದರೋಡೆಗಳ ಸ್ವರೂಪದ ಪ್ರಕಾರ ಜನರ ವಸ್ತುವಡವೆಗಳ ಜೊತೆಗೆ, ಅವರ ಜೀವವನ್ನೂ ಕೂಡಾ ದರೋಡೆ ಕೋರರು ತೆಗೆದುಕೊಳ್ಳುತ್ತಾ ಇದ್ದಾರೆ. ಇದು ಎಲ್ಲರ ಗಮನದಲ್ಲಿದೆ. ಇದು ಇತ್ತೀಚಿನ ತಿಂಗಳಲ್ಲಿ ಇಂತಹ ಪ್ರಕರಣಗಳು ಅವ್ಯಾಹತವಾಗಿ ನಡೆದಿವೆ. ಇಂತಹ ಪ್ರಕರಣಗಳಲ್ಲಿ ದರೋಡೆಕೋರರು ಬರೇ ವಸ್ತುವಡವೆಗಳನ್ನು ತೆಗೆದುಕೊಂಡು ಹೋಗಬೇಕೆಂದು ಈ ದರೋಡೆಗಳನ್ನು ಮಾಡುತ್ತಾ ಇಲ್ಲ. ವಸ್ತುಗಳನ್ನು ತೆಗೆದುಕೊಂಡು ಹೋಗತಕ್ಕಂತಹ ಸಂದರ್ಭಗಳಲ್ಲಿ ಅವರಿಗೆ ಅಡ್ಡ ಬರತಕ್ಕಂತಹವರನ್ನು ಹಲ್ಲೆ ಮಾಡುವುದು, ಅವರನ್ನು ಕೊಲೆ ಮಾಡುವುದು. ಹಾಗೆಯೇ ಇಂತಹ ಘಟನೆಗಳು ನಡೆಯತಕ್ಕಂತಹ ಸಂದರ್ಭಗಳಲ್ಲಿ ರಕ್ಷಣೆಗೆ ಬರತಕ್ಕಂತಹರ ಮೇಲೆ ಹಲ್ಲೆ ಮಾಡುವುದು,